ಒ ಎಸ್ ನಂ.290/2012
ಪಿ.ಡಬ್ಲ್ಯೂ: 3 ಹಾಜರು

ದಿನಾಂಕಃ 04-08-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀ ಸವಾಲು ಶ್ರೀಯುತ ಎಲ್ ಎಮ್ ಎಸ್ ವಕೀಲರಿಂದಃ
**(2 ರಿಂದ 5 ಮತ್ತು 7 ರಿಂದ 9 ಹಾಗೂ 19 ನೇ ಪ್ರತಿವಾದಿಗಳ ಪರವಾಗಿ)**

ಅಂಕದವರ ಕುಟುಂಬದವರು ಮೂಲತಃ ಅಕ್ಕಿಸಾಗರದವರು ಎಂದರೆ ಸರಿ. ಮೊದಲನೆ ಪ್ರತಿವಾದಿಯ ಅಕ್ಕಿಸಾಗರದಲ್ಲಿ ಏನು ಕೆಲಸ ಮಾಡುತಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಅಕ್ಕಿಸಾಗರದಿಂದ ಗೋಕಾಕಕ್ಕೆ ಅಂಕದವರ ಕುಟುಂಬ ಬಂದಾಗ ಅವರಿಗೆ ಯಾವುದೇ ನಿಶ್ಚಿತವಾದ ಉದ್ಯೋಗ ಇರಲಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿ ಗೋಕಾಕಕ್ಕೆ ಬಂದ ನಂತರ ಐಸ್ ಕ್ಯಾಂಡಿ ವ್ಯವಹಾರ ಪ್ರಾರಂಭಿಸಿದ ಎಂದರೆ ಸರಿ. ತದ ನಂತರ ಅದನ್ನು ಅಭಿವೃದ್ಧಿ ಪಡಿಸಿ ಜನತಾ ಕೊಲ್ಡ್ರಿಂಕ್ ಹೌಸ್ ಮಾಡಲಾಯಿತು ಎಂದರೆ ಸರಿ.

2 ನೇ ಪ್ರತಿವಾದಿ ಒಂದು ಟ್ರಕ್ಕನ್ನು ಹೊಂದಿದ್ದರು ಎಂದರೆ ಸರಿ. ಗಣಪತಿ ಹಬ್ಬದ ಸಂದರ್ಭದಲ್ಲಿ 2 ನೇ ಪ್ರತಿವಾದಿ ಪಟಾಕ್ಷಿ ಅಂಗಡಿಗಳನ್ನು ಹಾಕಿತ್ತಿದ್ದರು ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳು ಗೋಕಾಕ್ಕೆ ಬಂದ ನಂತರ ಸಂತೆ ಇದ್ದ ಊರುಗಳಲ್ಲಿ ಬಟ್ಟೆ ವ್ಯಾಪಾರ ಮಾಡಲು ಹೋಗುತ್ತಿದ್ದರು ಎಂದರೆ ಸರಿ. ಮೊದಲನೆ ಪ್ರತಿವಾದಿಯ ಎಲ್ಲಾ ಮಕ್ಕಳಿಗೆ ಈಗ ಒಂದೊಂದು ಅಂಗಡಿಗಳು ಇವೆ ಎಂದರೆ ಸರಿ. ಸದರಿ ಅಂಗಡಿಗಳು ಅವುಗಳನ್ನು ನಡೆಸುವವರ ಹೆಸರಿನಲ್ಲಿದೆ ಎಂದರೆ ನನಗೆ ಮಾಹಿತಿ ಇಲ್ಲ. ಅಂಗಡಿ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಸಂಬಂಧಪಟ್ಟ ಅಂಗಡಿಯವರು ಬ್ಯಾಂಕಿನಿಂದ ಸಾಲ ಪಡೆದುಕೊಳ್ಳುತ್ತಾರೆ ಎಂದರೆ ಸರಿ. ಸಾಲ ಪಡೆದುಕೊಂಡವರಿಗೆ ಬ್ಯಾಂಕಿನವರು ನೋಟಿಸು ನೀಡಿ ಅವರೇ ಸಾಲ ಮರು ಪಾವತಿ ಮಾಡುತ್ತಾರೆ ಎಂದರೆ ಸರಿ. ಅಂಗಡಿ ವ್ಯಾಪಾರ ಮಾಡುತ್ತಿರುವವರು ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಆದರೆ ಯಾರ ಹೆಸರಿನಲ್ಲಿ ಖರೀದಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ವಾದಿ ಮನೆ ಕಟ್ಟಿಸಿರುತ್ತಾರೆ. ಆದರೆ ಅದು ಯಾರ ಹೆಸರಿನಲ್ಲಿದೆ ಎಂಬುದು ನನಗೆ ಗೊತ್ತಿಲ್ಲ. ವಾದಿ ಮತ್ತು ಮೊದಲನೆ ಪ್ರತಿವಾದಿಯ ಮಕ್ಕಳು ತಮ್ಮ ತಮ್ಮ ತೆರಿಗೆ ರಿಟರ್ನ್ಸ್‌ನ್ನು ತಮ್ಮ ಹೆಸರಿನಲ್ಲಿ ತುಂಬುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೊದಲನೆ

ಪ್ರತಿವಾದಿಯ ಮಕ್ಕಳು ಮಾಡುವ ಉದ್ಯೋಗಗಳು ಪಾಲುದಾರಿಕೆ ಉದ್ಯೋಗಗಳು ಎಂದರೆ ನನಗೆ ಗೊತ್ತಿಲ್ಲ.

ನಾನು ದಾವಾ ಐಟೆಮ ನಂ.1 ನ್ನು ಮಾರಾಟ ಮಾಡಿದ ಕ್ರಯ ಪತ್ರಕ್ಕೆ ಸಾಕ್ಷಿದಾರನಾಗಿರುತ್ತೇನೆ. ಸದರಿ ಕ್ರಯ ಎಷ್ಟು ಹಣಕ್ಕೆ ಆಗಿದೆ ಎಂದು ನನಗೆ ಗೊತ್ತಿಲ್ಲ ಸದರಿ ಜಮೀನನ್ನು ಮಾರಿ ವಾದಿ ಯಾವ ಬ್ಯಾಂಕಿನ ಸಾಲ ತೀರಿಸಿದ ಎಂಬುದು ನನಗೆ ಗೊತ್ತಿಲ್ಲ. ನನಗೆ ಅಂಕದವರ ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು 2 ನೇ ಪ್ರತಿವಾದಿ ತಮ್ಮ 2 ದಾವಾ ಆಸ್ತಿಗಳನ್ನು ಮಾರಾಟ ಮಾಡಿ ವ್ಯಾಪಾರವನ್ನು ಅಭಿವೃದ್ಧಿ ಪಡಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಶ್ರೀಯುತ ಎನ್ ಎಸ್ ಜೆ ವಕೀಲರಿಂದಃ</u>

<u>**(1** ಹಾಗೂ **11** ರಿಂದ **14** ನೇ ಪ್ರತಿವಾದಿಗಳ ಪರವಾಗಿ**)**</u>

ಪ್ರಶಾಂತ ಲಾಡ್ಜ ಇರುವ ಆಸ್ತಿ ಮೊದಲನೆ ಪ್ರತಿವಾದಿ ಖರೀದಿ ಮಾಡಿದ ಜಾಗೆಯಲ್ಲಿದೆ ಎಂದರೆ ಸರಿ. ಸದರಿ ಆಸ್ತಿ ಮೊದಲನೆ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. 30 ವರ್ಷಗಳ ಹಿಂದೆ ಮೊದಲನೆ ಪ್ರತಿವಾದಿ 11 ನೇ ಪ್ರತಿವಾದಿಯೊಂದಿಗೆ ಸಿಂಡಿಕೇಟ ಬ್ಯಾಂಕಿನಲ್ಲಿ ಸಾಲ ಪಡೆದು ಪ್ರಶಾಂತ ಲಾಡ್ಜ ಕಟ್ಟಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 07-12-2010 ರಂದು ಮೊದಲನೆ ಪ್ರತಿವಾದಿ ಸದರಿ ಆಸ್ತಿಯನ್ನು 11 ನೇ ಪ್ರತಿವಾದಿಗೆ ಬಕ್ಸಿಸು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಬಕ್ಸಿಸು ಪತ್ರ ಮಾಡಿಕೊಟ್ಟಾಗಿನಿಂದ ಸದರಿ ಆಸ್ತಿ 11 ನೇ ಪ್ರತಿವಾದಿಯ ಕಬ್ಜೆಯಲ್ಲಿದೆ ಎಂದರೆ ಸರಿ. ನಾನು ಕೊನೆಯ ಬಾರಿ ಸದರಿ ಪ್ರಶಾಂತ ಲಾಡ್ಜಗೆ 6 ತಿಂಗಳ ಹಿಂದೆ ಹೋಗಿದ್ದೆ. ಸದರಿ ಪ್ರಶಾಂತ ಲಾಡ್ಜ 5 ವರ್ಷದ ಹಿಂದೆ ಬಂದ್ ಆಗಿದೆ ಎಂದರೆ ಸರಿ. 11 ನೇ ಪ್ರತಿವಾದಿ ಬ್ಯಾಂಕಿನಿಂದ ಸಾಲ ಪಡೆದುಕೊಂಡು ಪ್ರಶಾಂತ ಲಾಡ್ಜನ್ನು ರಿನೋವೇಷನ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮೊಬೈಲ್ ಅಂಗಡಿ 11 ನೇ ಪ್ರತಿವಾದಿ ಮತ್ತು ಆತನ ಮಕ್ಕಳ ಪಾಲುದಾರಿಕೆ ವ್ಯವಹಾರ ಎಂದರೆ ಸರಿ. ಸದರಿ ವ್ಯವಾಹರಕ್ಕೆ ಸಂಬಂಧಪಟ್ಟಂತೆ ಸಾಲವನ್ನು 11 ನೇ ಪ್ರತಿವಾದಿ ತುಂಬುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೊಬೈಲ ವ್ಯಾಪಾರ 11 ನೇ ಪ್ರತಿವಾದಿಯ ಸ್ವಂತ ವ್ಯವಾಹರ ಎಂದರೆ ಸರಿ. ಸದರಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ತೆರಿಗೆ 11 ನೇ ಪ್ರತಿವಾದಿಯ ವೈಯಕ್ತಿಕ ನೆಲೆಯಲ್ಲಿ ತುಂಬುತ್ತಾರೆ ಎಂದರೆ ಸರಿ. ಮೊದಲನೆ ಪ್ರತಿವಾದಿಗೆ ನನಗೆ 30-35 ವರ್ಷಗಳಿಂದ ಪರಿಚಯ. ನಾನು ಮೊದಲನೆ ಪ್ರತಿವಾದಿಯ ಮನೆತನದ ಕಾರ್ಯಕ್ರಮಗಳಿಗೆ ಹೋಗುತ್ತಿದ್ದೆ. ನನ್ನ ಬಳಿ ಸದರಿ ಕಾರ್ಯಕ್ರಮಕ್ಕೆ ಹೋದ

ಬಗ್ಗೆ ಫೋಟೋ ಅಥವಾ ಆಮಂತ್ರ ಣ ಪತ್ರಿಕೆ ಇಲ್ಲ. ಮೊದಲನೆ ಪ್ರತಿವಾದಿ ನನಗೆ ಪರಿಚಯ ಇಲ್ಲ ನನಗೆ ಆತನ ಪರಿಚಯ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲನೆ ಪ್ರತಿವಾದಿಯ ಕುಟುಂಬಕ್ಕೆ ಬಟ್ಟೆ ಅಂಗಡಿಗಳು ಇಲ್ಲ ಎಂದರೆ ಸಾಕ್ಷಿ ಅವರೆಲ್ಲರೂ ಕೂಡಿಯೇ ಇರುತ್ತಾರೆಂದು ನುಡಿದಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ನನ್ನ ಬಾಯಿ ಹೇಳಿಕೆಯನ್ನು ಹೊರತು ಪಡಿಸಿ ಬೇರೆ ದಾಖಲಾತಿ ಇಲ್ಲ.

ವಾದಿ ಮತ್ತು ಪ್ರತಿವಾದಿಗಳು ಕುಟುಂಬಕ್ಕೆ ಗೋಕಾಕ ಹಾಗೂ ಬೆಳಗಾವಿಯ ನಗರದಲ್ಲಿ ಆಸ್ತಿಗಳ ಸರ್ವೆ ನಂ. ಹಾಗೂ ಸದರಿ ಆಸ್ತಿಗಳು ಎಲ್ಲಿ ಇರುತ್ತವೆ ಎಂಬುದು ನನಗೆ ಗೊತ್ತಿಲ್ಲ. ಸದರಿ ಕುಟುಂಬಕ್ಕೆ ಗೋಕಾಕ ಮತ್ತು ಬೆಳಗಾವಿಯಲ್ಲಿ ಆಸ್ತಿಗಳು ಇವೆ ಎಂದು ನಾನು ಹೇಳಿ ಬರೆಸಿಲ್ಲ . ಈ ದಾವೆ 2012 ರಿಂದ ಚಾಲ್ತಿಯಲ್ಲಿ ಇರುತ್ತದೆ. ಈ ದಾವೆ ಹಾಕುವ ಮೊದಲು ವಾದಿ ಮತ್ತು ಪ್ರತಿವಾದಿಗಳು ಬೇರೆ ಬೇರೆ ಇದ್ದು ಪ್ರತ್ಯೇಕ ವ್ಯವಹಾರ ಮಾಡುತ್ತಾರೆ ಎಂದರೆ ಸರಿ. ಹಾಗೂ ಅವರು ಸಂಬಂಧ ಸರಿಯಾಗಿರಲಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಹಾಕಿದ ನಂತರವೂ ಸಹ ವಾದಿ ಮತ್ತು ಪ್ರತಿವಾದಿಗಳು ನಡುವೆ ಸಂಬಂಧ ಚೆನ್ನಾಗಿಲ್ಲ ಎಂದರೆ ಸರಿಯಲ್ಲ. ಒಂದನ್ನು ಕ್ರಯಕ್ಕೆ ನೀಡಲು ವಾದಿ ಮಾತ್ರ ಕ್ರಯ ಪತ್ರಕ್ಕೆ ಸಹಿ ಮಾಡಿದ್ದಾನೆ ಎಂದರೆ ಸರಿ . ಸದರಿ ಕ್ರಯ ಪತ್ರದ ಹಣವನ್ನು ವಾದಿ ಮಾತ್ರ ಪಡೆದುಕೊಂಡಿದ್ದಾನೆ ಎಂದರೆ ಸಾಕ್ಷಿ ಎಲ್ಲರೂ ಹಂಚಿಕೊಂಡಿದ್ದಾರೆಂದು ನುಡಿದಿರುತ್ತಾರೆ. ಸದರಿ ಆಸ್ತಿಯ ಖರೀದಿ ಆಗುವ ಸಮಯಕ್ಕೆ ಚಕ್ ಮುಖಾಂತರ ಹಣ ನೀಡಲಾಗಿರುತ್ತದೆ. ಸದರಿ ಕ್ರಯದ ಹಣವನ್ನು ವಾದಿ ತನ್ನ ಸ್ವಂತಕ್ಕಾಗಿ ಉಪಯೋಗಿಸಿದ್ದಾನೆ ಎಂದರೆ ಸರಿಯಲ್ಲ. ನನ್ನನ್ನು ಸಾಕ್ಷ್ಯಕ್ಕಾಗಿ ವಾದಿ ಕರೆದುಕೊಂಡು ಬಂದಿದ್ದಾನೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ಯಾರಾದಲ್ಲಿ ಹೇಳಿದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನಂ.2 ರಿಂದ 5 ಹಾಗೂ 7 ರಿಂದ 9 ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪರವಾಗಿ ಅಳವಡಿಸಿಕೊಂಡಿರುತ್ತಾರೆ.

<u>ಪಾಟೀ ಸವಾಲು ಶ್ರೀಯುತ ಎಸ್ ಸಿ ಜಿ ವಕೀಲರಿಂದಃ</u>

(10 ನೇ ಪ್ರತಿವಾದಿಯ ಪರವಾಗಿ)

ನನಗೆ ವಾದಿ ಮತ್ತು ಪ್ರತಿವಾದಿಗಳ ಪರಿಚಯ 35 ವರ್ಷಗಳಿಂದ ಇರುತ್ತದೆ. 2011 ರಲ್ಲಿ ವಾದಿ ಮತ್ತು ಪ್ರತಿವಾದಿಗಳ ನಡುವೆ ತಂಟೆ ಆಗಿರುತ್ತದೆ. ನಾನು ಪಾಲನ್ನು ಮಾಡಿ

ಕೊಡುವ ಬಗ್ಗೆ ಹಿರಿತನ ಮಾಡಿದ್ದೆ ಆದರೆ ಪಾಲು ಮಾಡಿ ಕೊಟ್ಟಿಲ್ಲ. ದಾವಾ ಐಟೆಮ ನಂ.1 ನ್ನು ಮಾರಾಟ ಮಾಡುವ ಕಾಲಕ್ಕೆ ನಾನು ಹಿರಿತನ ಮಾಡಿದ್ದೆ. ಸದರಿ ಆಸ್ತಿಯನ್ನು ನಾನು ಕುಳ್ಳೂರವರಿಗೆ ಮಾರಾಟ ಮಾಡಿಸಿಕೊಟ್ಟಿದೇನೆ. ಆದರೆ ಕ್ರಯದ ಮೊಬಲಗು ನನಗೆ ನೆನಪಿಲ್ಲ. ಸದರಿ ಆಸ್ತಿಯನ್ನು ಮಾರಾಟ ಮಾಡಬಾರದು ಎಂದು ಮನಾಯಿ ಆದೇಶ ಇತ್ತು ಎಂದರೆ ಸರಿ. ನಾನು ಮತ್ತು ವಾದಿ ಮಿಲಾಪಿಯಾಗಿ ಸದರಿ ಆಸ್ತಿಯನ್ನು ಪರಭಾರೆ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಮಾರಾಟ ಮಾಡಿದ ಬಂದ ಹಣವನ್ನು ಯಾರು ಯಾರು ಎಷ್ಟೇಷ್ಟು ಪಡೆದಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಕ್ರಯ ಪತ್ರಕ್ಕೆ ವಾದಿ ಮತ್ತು 2 ನೇ ಪ್ರತಿವಾದಿ ಮಾಡಿರುತ್ತಾರೆ. ಸದರಿ ಕ್ರಯ ಪತ್ರಕ್ಕೆ 10 ನೇ ಪ್ರತಿವಾದಿಯ ಸಹಿ ಪಡೆದುಕೊಂಡಿಲ್ಲ. ಸದರಿ ಆಸ್ತಿಯನ್ನು ಎಲ್ಲರು ಕೂಡಿ ಮಾರಾಟ ಮಾಡಿದ್ದು ಹಣವನ್ನು ಹಂಚಿಕೊಂಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರಶಾಂತ ಲಾಡ್ಜ ಇರುವ ಜಾಗೆಯಲ್ಲಿ ಅಂಕದವರು ಕುಟಂಬದ ಐಸ್‌ಕ್ಯಾಂಡಿ ಅಂಗಡಿ ಇತ್ತು ಎಂದರೆ ಸರಿ. ಪ್ರಶಾಂತ ಲಾಡ್ಜ ಇರುವ ಆಸ್ತಿ ಕೋನಪ್ಪ ಶಂಕರೆಪ್ಪ ಅಂಕದವರ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು 10 ನೇ ಪ್ರತಿವಾದಿಯ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. 1955 ರಲ್ಲಿ ಕೋನಪ್ಪ ಶಂಕರೆಪ್ಪ ಅಂಕದವರ ತೀರಿಕೊಂಡ ನಂತರ ಸದರಿ ಆಸ್ತಿ ಮೊದಲನೆ ಪ್ರತಿವಾದಿಗೆ ಬಂತು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಸದರಿ ಆಸ್ತಿ ಮೊದಲನೆ ಪ್ರತಿವಾದಿಯ ಹೆಸರಿನಲ್ಲಿ ಇದ್ದ ವಿಷಯ ನನಗೆ ಗೊತ್ತು. ಪ್ರಶಾಂತ ಲಾಡ್ಜ ಇರುವ ಆಸ್ತಿ ಹಿರಿಯರಿಂದ ಬಂದ ಆಸ್ತಿ ಎಂದರೆ ಇರಬಹುದು ಎಂದು ನುಡಿದಿರುತ್ತಾರೆ. 10 ನೇ ಪ್ರತಿವಾದಿ ವೆಂಕಟೇಶ ಸಂಪ್ಲಾಯರ್ಸ ಎಂಬ ಹೆಸರಿನಲ್ಲಿ ಪಶು ಆಹಾರ ತಯಾರಿಸುತ್ತಿದ್ದ ಎಂದರೆ ಸರಿ. ಸದರಿ ಉದ್ಯೋಗದಿಂದ ಎಕ್ಸಟೆನಷನ ಏರಿಯಾದಲ್ಲಿ ಮನೆ ಕಟ್ಟಿಸಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಯ ಮೇಲೆ ಸಾಲ ಇದೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ಅಣ್ಣ ತಮಂದಿರ ಸೇರಿ ದಿನಾಂಕಃ 17-03-2005 ರಂದು ದಾವಾ ಐಟೆಮ ನಂ.18 ನ್ನು ನೊಂದಾಯಿತ ವಾಟ್ನಿ ಪತ್ರದ ಮೂಲಕ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಮೇಲೆ ಸಾಲ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾನು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನಂ.15 ರಿಂದ 17 ಪರ ವಕೀಲರಾದ ಶ್ರೀ ಆರ್ ಬಿ ಕೆ ವಕೀಲರು ತಮ್ಮ ಪರವಾಗಿ ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ. ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ